ಅಧ್ಯಕ್ಷರು:- ಒಪ್ಪಿಗೆ ಆಯಿತು. ಈಗ ಸಭೆಯ ಮುಂದಿಡಲಾಗುವ ಕಾಗದಪತ್ರಗಳು.

ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ

1. ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಮಂತ್ರಿ) :-ಮಾನ್ಯ ಅಧ್ಯಕ್ಷರೆ, 1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ.

ಅ ಅಧಿಸೂಚನೆ ಸಂಖ್ಯೆ : ಹೆಚ್‌ಡಿ 256 ಸಿಎನ್‌ಎ 88 ದಿನಾಂಕ 20ನೇ ಮಾರ್ಚ್ 1992 ಮಂಡ್ಯ ಜಿಲ್ಲೆಯ ಮೆಲ್ಲಹಳ್ಳಿಯಲ್ಲಿ ಖಾಯಂ ಚಿತ್ರಮಂದಿರದ ಕಟ್ಟಡವನ್ನು ಪೂರ್ಣಗೊಳಿಸಲು ನೀಡಲಾದ ನಿರಾಕ್ಷೇಪಣಾ ಪತ್ರದ ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸುವ ಬಗ್ಗೆ.

ಆ ಅಧಿಸೂಚನೆ ಸಂಖ್ಯೆ :ಹೆಚ್‌ಡಿ 3 ಸಿಎನ್‌ಎ 92 ದಿನಾಂಕ 26ನೇ ಮಾರ್ಚ್1992 ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿಯ ಕುರುಬರಹಳ್ಳಿ ಗ್ರಾಮದಲ್ಲಿ ಶ್ರೀ ನಾಗರಾಜಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲು ದಿನಾಂಕ28-12-1991ರವರೆಗೆ ಆಗಿರುವ ವಿಳಂಬವನ್ನು ಮನ್ನಾ ಮಾಡುವ ಬಗ್ಗೆ.

ಇ ಅಧಿಸೂಚನೆ ಸಂಖ್ಯೆ : ಹೆಚ್‌ಡಿ 205 ಸಿಎನ್‌ಎ 91 ದಿನಾಂಕ 24ನೇ ಮಾರ್ಚ್ 1992 ಮರಾಠಾ ಲೈಟ್ ಇನ್‌ಫ್ಯಾಂಟ್ರಿ ರೆಜಿಮೆಂಟ್ ಕೇಂದ್ರ, ಬೆಳಗಾಂ, ಇವರು ತಮ್ಮ ಆಡಿಟೋರಿಯಂನಲ್ಲಿ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ, ಹಾಗೂ

ಈ ಅಧಿಸೂಚನೆ ಸಂಖ್ಯೆ : ಹೆಚ್ ಡಿ 30 ಸಿಎನ್‌ಎ 92 ದಿನಾಂಕ 25ನೇ ಮಾರ್ಚ್ 1992 ಉತ್ತರ ಕನ್ನಡ ಜಿಲ್ಲೆಯ ಬಣಗಾದಲ್ಲಿರುವ ಬಳ್ಳಾಪುರ ಉದ್ದಿಮೆಯವರು ತಮ್ಮ ಸಭಾಂಗಣದಲ್ಲಿ 35 ಎಂ.ಎಂ. ಫಿಲಂ ಪ್ರದರ್ಶಿಸಲು ವಿನಾಯಿತಿ ನೀಡುವ ಬಗೆಗಿನ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

2. ಶ್ರೀ ಬ್ಲೇಸಿಯಸ್.ಎಂ.ಡಿಸೌಜ : (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಯವರ ಪರವಾಗಿ1956ನೇ ಸಾಲಿನ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ, 1990-91ನೇ ಸಾಲಿನ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್‌ನ ಲಿಮಿಟೆಡ್ 10ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

3. ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿ) ಮಾನ್ಯ ಅಧ್ಯಕ್ಷರೆ, 1980ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಬಿವೃದ್ಧಿ ಅಧಿನಿಯಮದ 25ನೇ ಕಲಮಿನ ಮೇರೆಗೆ, 1990-91ನೇ ಸಾಲಿನ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ, ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ ಆಯಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

4. ಶ್ರೀ ಕೆ.ಜೆ.ಜಾರ್ಜ್ : (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮಂತ್ರಿಯವರ ಪರವಾಗಿ 974ನೇ ಸಾಲಿನ ಜಲ (ಮಾಲಿನ್ಯ ಮತ್ತು ನಿಯಂತ್ರಣ) ಕಾಯ್ದೆಯ 39 (2)ನೇ ಕಲಮಿನ ಮೇರೆಗೆ, 1990-

91ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

5. ಶ್ರೀ ಎನ್.ಚಿಕ್ಕೇಗೌಡ (ಕೃಷಿ ಮಂತ್ರಿ) :- ಮಾನ್ಯ ಅಧ್ಯಕ್ಷರೆ,1956ನೇ ಸಾಲಿನ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ ;

ಅ 1990-91ನೇ ಸಾಲಿನ ಮೈಸೂರು ಟೊಬ್ಯಾಕೋ ಕಂಪನಿ ನಿಯಮಿತದ 54ನೇ ವಾರ್ಷಿಕ ವರದಿ ; ಹಾಗೂ

ಆ 1988-89ನೇ ಸಾಲಿನ ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್‌ನ 16ನೇ ವಾರ್ಷಿಕ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

6. ಶ್ರೀ ವಿ.ಮುನಿಯಪ್ಪ (ರೇಷ್ಮೆ ರಾಜ್ಯ ಮಂತ್ರಿ):- ಮಾನ್ಯ ಅಧ್ಯಕ್ಷರೆ,1956ನೇ ಸಾಲಿನ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ; 1990-91ನೇ ಸಾಲಿನ ಕರ್ನಾಟಕ ರೇಷ್ಮೆ ಮಾರಾಟ ಮಂಡಲಿ ನಿಯಮಿತದ 2ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

7. ಶ್ರೀ ಕೆ.ಜೆ.ಜಾರ್ಜ್ : (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೇ, ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಯವರ ಪರವಾಗಿ 1956ನೇ ಸಾಲಿನ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ ;1991-92ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ

ಅಧ್ಯಕ್ಷರು:- ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಗಮನ ಸೆಳೆಯುವಸೂಚನೆ

ವಿಷಯ : ರಾಜ್ಯದಲ್ಲಿ ಹುಡ್ಕೋ ಯೋಜನೆಯಡಿ ಸಮಾಜದ ದುರ್ಬಲವರ್ಗದವರಿಗೆ ಮನೆಗಳನ್ನು ಕಟ್ಟಿಸಿಕೊಡುವಲ್ಲಿ ಆಗಿರುವ ವಿಳಂಬದಿಂದ ಫಲಾನುಭವಿಗಳಿಗೆ ಆಗಿರುವ ತೊಂದರೆ ಕುರಿತು.

ಶ್ರೀ ಸಿ.ಎಂ.ಲಿಂಗಪ್ಪ:-(ರಾಮನಗರ):- ಮಾನ್ಯ ಅಧ್ಯಕ್ಷರೆ, ಹುಡ್ಕೋ ನೆರವಿನಿಂದ ಗ್ರಾಮಾಂತರದಲ್ಲಿ ದುರ್ಬಲವರ್ಗದವರಿಗೆ ಮತ್ತು ಪರಿಶಿಷ್ಟ ವರ್ಗದವರಿಗೆ ಆರ್ಥಿಕವಾಗಿ ಹಿಂದುಳಿದ ವ್ಯಕ್ತಿಗಳನ್ನು ಗುರ್ತಿಸಿ ಮನೆ ಇಲ್ಲದಿರುವವರಿಗೆ ಗುಡಿಸಲಲ್ಲಿ ವಾಸ ಮಾಡುವವರಿಗೆ ಗೃಹನಿರ್ಮಾಣಕ್ಕೆ ನೆರವು ನೀಡುವ ಒಂದು ಕಾರ್ಯಕ್ರಮ ಹಿಂದಿನಿಂದ ಬಂದಿದೆ. ಫಲಾನುಭವಿಗಳನ್ನು ಗುರ್ತಿಸುವ ಕೆಲಸವಾದರೂ ಪರಿಶಿಷ್ಟ ಜಾತಿಯಲ್ಲಿ ತೀರಾ ಹಿಂದುಳಿದವರು, ಆರ್ಥಿಕವಾಗಿ ಹಿಂದುಳಿದಿರುವವರು ಹಾಗೂ ದುರ್ಬಲರಿಗೆ ಒಂದು ಖಾಯಮಾದ ಸೂರನ್ನು ನಿರ್ಮಾಣ ಮಾಡಿಕೊಡಬೇಕೆಂಬ ಉದ್ದೇಶದಿಂದ ಸರ್ಕಾರ ಈ ಕಾರ್ಯಕ್ರಮವನ್ನು ಬಹಳ ವರ್ಷಗಳಿಂದ ಹಾಕಿಕೊಂಡು ಬರುತ್ತಿದೆ. ಈ ಕಾರ್ಯಕ್ರಮ 1987-88, 1988-89ನೇ ಸಾಲುಗಳಲ್ಲಿ ಫಲಾನುಭವಿಗಳನ್ನು ಗುರ್ತಿಸಿ ಜಿಲ್ಲಾಪರಿಷತ್ ಮೂಲಕ ಪಟ್ಟಿಯನ್ನು ಬಿಡುಗಡೆ ಮಾಡಿ , ನೀವು ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಇದೆ ಎಂದು ಹೇಳಿದ ನಂತರ ತಹಲ್‌ವರೆವಿಗೂ ಈ ಎರಡು ವರ್ಷಗಳ ಹಣವನ್ನು ಸರ್ಕಾರ ಬಿಡುಗಡೆ ಮಾಡಲು ಆಗಿಲ್ಲ. ಸರ್ಕಾರದ ನೆರವನ್ನು ನಿರೀಕ್ಷೆ ಮಾಡಿದ ಫಲಾನುಭವಿಗಳು ತಮ್ಮ ಮನೆಗಳನ್ನು ವಿವಿಧ ಹಂತಗಳಲ್ಲಿ ಕಟ್ಟಿ ನಿಲ್ಲಿಸಿಕೊಂಡಿದ್ದಾರೆ. 1987-88 ರಲ್ಲಿ ಪಾಯ ಹಾಕಿದರು, ಹಣ ಬರಲಿಲ್ಲ ಹಾಗೆಯೇ